ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವಶ್ಯವಿರುವ ಕಡೆಗಳಲ್ಲಿ ಹೆಚ್ಚುವರಿಯಾಗಿ ಅಂಗನವಾಡಿಗಳನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೆ : ಇದ್ದಲ್ಲಿ ಆ ಕುರಿತು ಕ್ರಮಗಳೇನು :

ಈ) ಬೆಳ್ತಂಗಡಿ ತಾಲ್ಲೂಕು (ದ.ಕ) ಪ್ರದೇಶದಲ್ಲಿ ಹೊಸತಾಗಿ ಪ್ರೌಢಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೆ: ಇದ್ದಲ್ಲಿ ಯಾವ ಯಾವ ಪ್ರದೇಶಗಳಲ್ಲಿ ತೆರೆಯಲಾಗುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರೌಢ ಶಾಲೆಗಳಲ್ಲಿ ಅರೆ ಕಾಲಿಕ ಶಿಕ್ಷಕರುಗಳನ್ನು ನೇಮಿಸಲು ಅವಕಾಶವಿರುವುದಿಲ್ಲ.

ಆ) ಈಗಾಗಲೇ ಪ್ರಸ್ತುತ ಜಾರಿಯಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಸಿಲಬಸ್‌ನಲ್ಲಿ ಯೋಗ ಶಿಕ್ಷಣವು ಸೇರಿದೆ. ಯೋಗ ಶಿಕ್ಷಣವು ದೈಹಿಕ ಮತ್ತು ಆರೋಗ್ಯ ಶಿಕ್ಷಣದ ದೈಹಿಕ ಮತ್ತು ಆರೋಗ್ಯ ಶಿಕ್ಷಣ ಒಂದು ಭಾಗವಾಗಿದೆ. ಪ್ರಸ್ತುತ ಪಠ್ಯಕ್ರಮದಂತೆ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಹಂತದಲ್ಲಿ ಒಟ್ಟಿಗೆ ದೈಹಿಕ ಮತ್ತು ಆರೋಗ್ಯ ಶಿಕ್ಷಣಕ್ಕೆ ವಾರಕ್ಕೆ4 ಅವಧಿಗಳನ್ನು ನಿಗದಿ ಪಡಿಸಿದ್ದು, ಅದರಲ್ಲಿಯೋಗ ಶಿಕ್ಷಣಕ್ಕೆ ಒಂದು ಅವಧಿಯನ್ನು ಬಳಸಿಕೊಳ್ಳುವಂತೆ ಸುತ್ತೋಲೆಯನ್ನು ನೀಡಲಾಗಿದೆ. ದೈಹಿಕ ಶಿಕ್ಷಕರಿಗೆ ಹಾಗೂ ಇತರ ಶಿಕ್ಷಕರ ವ್ಯಾಪಕವಾಗಿ ಯೋಗ ಶಿಕ್ಷಣದಲ್ಲಿ ತರಬೇತಿಯನ್ನು ಹಂತ ಹಂತವಾಗಿ ನೀಡಲಾಗಿದೆ.

ಇ) ಶಿಕ್ಷಣ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಈ) ಇಲ್ಲ

ರಾಜ್ಯದಲ್ಲಿನ ದೈಹಿಕ ಶಿಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ವಿಚಾರ.

2749 (3473) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 20 ವರ್ಷಗಳ ಸೇವೆ ಸಲ್ಲಿಸಿದ ಗ್ರೇಡ್-2 ದೈಹಿಕ ಶಿಕ್ಷಕರ ವೃಂದದಲ್ಲಿ ಸೀನಿಯರ್ ಗ್ರೇಡ್-2, ದೈಹಿಕ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಕುರಿತು ಸರ್ಕಾರವು ಜೂನ್ 1999ರಲ್ಲಿಆದೇಶ ಹೊರಡಿಸಿರುವುದು ನಿಜವಲ್ಲವೆ;

ಆ) ಸದರಿ ಸೀನಿಯರ್ ಗ್ರೇಡ್-2, ದೈಹಿಕ ಶಿಕ್ಷಕರುಗಳ ಹುದ್ದೆಗಳಿಗೆ ಮುಂಬಡ್ತಿ ನೀಡಲು ಈ ವೃಂದಕ್ಕೆ ಸಂಬಂಧಿಸಿದ ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತರುವುದು ಅವಶ್ಯಕವಾಗಿರುವುದಲ್ಲವೆ;

ಇ) ಸದರಿ ವೃಂದದ, ವೃಂದ ಮತ್ತೆ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆಯವರು ಶಿಕ್ಷಣ ಇಲಾಖೆಯಿಂದ ಅವಶ್ಯಕ ಮಾಹಿತಿಗಳನ್ನು ಸತತವಾಗಿ ಕೋರಿರುವುದು ನಿಜವಲ್ಲವೆ;

ಈ) ಸದರಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತರುವಲ್ಲಿ ಸೂಕ್ತ ಮಾಹಿತಿಗಳನ್ನು ಶಿಕ್ಷಣ ಇಲಾಖೆಯು ಒದಗಿಸದೇ ಇರುವುದರಿಂದ ಈ ಕುರಿತು ಸರ್ಕಾರಿ ಆದೇಶದ ಪ್ರಯೋಜನ ಇನ್ನೂ ಕೂಡ ರಾಜ್ಯದಲ್ಲಿನ ಅರ್ಹ ದೈಹಿಕ ಶಿಕ್ಷಕರಿಗೆ ದೊರಕಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಎಷ್ಟು ಸಮಯದ ಒಳಗಡೆ ಅರ್ಹ ದೈಹಿಕ ಶಿಕ್ಷಕರಿಗೆ ಸೀನಿಯರ್ ಗ್ರೇಡ್-2 ಮುಂಬಡ್ತಿಗಳನ್ನು ಕಲ್ಪಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು

ಇ) ನಿಜ.

ಈ) ತ್ವರಿತಗತಿಯಲ್ಲಿ ಪರಿಶೀಲನೆ ನಡೆಯುತ್ತಿದ್ದು ವ್ಯಂದ ಮತ್ತು ನೇಮಕಾತಿ ನಿಯಮಗಳ ರಚನೆ ಆದ ತಕ್ಷಣ ಬಡ್ತಿ ಅವಕಾಶ ಕಲ್ಪಿಸಲಾಗುವುದು.

ಖಾಸಗಿ ಅನುದಾನಿತ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿನ ಹೆಚ್ಚುವರಿ ವಿಭಾಗ ವಿಷಯಗಳನ್ನು ಅನುದಾನಕ್ಕೆ ಒಳಪಡಿಸದಿರುವ ವಿಚಾರ.

2750 (3474) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಹಾಗೂಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕ್ಷಣ ಇಲಾಖೆಯ ಮೈಸೂರುವಿಭಾಗದ ವ್ಯಾಪ್ತಿಯಲ್ಲಿ ಯಾವ ಯಾವ ಪ್ರೌಢ ಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳ ಹೆಚ್ಚುವರಿ ವಿಷಯಗಳಿಗೆ ನೇಮಕಗೊಂಡ ನೇಮಕಾತಿಯನ್ನು ನುದಾನ ರಹಿತವಾಗಿ ಅನುಮೋದಿಸಲಾಗಿರುತ್ತದೆ (ದಿನಾಂಕ. 31-3-2000 ರಲ್ಲಿದ್ದಂತೆ ಮಾಹಿತಿಗಳನ್ನು ಶಾಲೆಗಳ ಹೆಸರುಸಹಿತ ಜಿಲ್ಲಾವಾರು ವಿವರ ನೀಡುವುದು)

ಆ) ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಇಂಥ ವಿಷಯಗಳಲ್ಲಿನ ನೇಮಕಗಳನ್ನು ಅನುದಾನಕ್ಕೆ ಒಳಪಡಿಸುವಲ್ಲಿ ಸರಕಾರವು 1996ರಲ್ಲಿ ಆದೇಶ ಹೊರಡಿಸಿ ಮಾರ್ಗ ಸೂಚಿಗಳನ್ನು ನೀಡಿರುವುದು ನಿಜವಲ್ಲವೆ; ಹಾಗೂ ಅನುದಾನಕ್ಕೆ ಒಳಪಡಿಸುವ ಅಧಿಕಾರವನ್ನು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಸಹನಿರ್ದೇಶಕರಿಗೆ ನೀಡಿರುವುದು ನಿಜವಲ್ಲವೇ?

ಇ) ಮೇಲೆ ತಿಳಿಸಿದ ಆದೇಶದ ಮಾರ್ಗ ಸೂಚಿಯನ್ವಯ ಯಾವ ಯಾವ ಪ್ರಕರಣಗಳಲ್ಲಿ ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಈವರೆಗೆ ಪ್ರತಿವರ್ಷದ ಆರ್ಥಿಕ ಆಯವ್ಯಯದ ನಿಗದಿ ಪಡಿಸಿದ ಮೊಬಲಗಳನ್ನು ಅನುದಾನರಹಿತವಾಗಿ ಮಂಜೂರಾದ ಹೆಚ್ಚುವರಿ ವಿಭಾಗದ ಹುದ್ದೆಗಳ ನೇಮಕವನ್ನು ಅನುದಾನಕ್ಕೆ ಒಳ ಪಡಿಸಲು ಉಪಯೋಗಿಸಲಾಗಿರುತ್ತದೆ? (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1997-98 ಮಂಡ್ಯ ಜಿಲ್ಲೆ:-

1) ಎಸ್.ಸಿ. ಎಂ. ಪ್ರಾಶಾಲೆ, ಸೋಮಹಳ್ಳಿ-2 ಶಿಕ್ಷಕರು

2) ಎಂ. ವಿಶ್ವೇಶ್ವರಯ್ಯ ಪ್ರೌಢ ಶಾಲೆ - 3 ಶಿಕ್ಷಕರು

ಹಾಸನ ಜಿಲ್ಲೆ :-

1) ಬೂದೇಶ್ವರಸ್ವಾಮಿ ಪ್ರೌಢ ಶಾಲೆ ಹಾಸನ-2 ಶಿಕ್ಷಕರು

2) ಚೇತನ ಪ್ರಾ ಶಾಲೆ, ಸಕಲೇಪುರ - 1 ಶಿಕ್ಷಕರು.